

ಚಾರಣಿಗರ ಬಾಯಲ್ಲಿ 'ನಿಜಗಲ್ ಬೆಟ್ಟ' ಎಂದು
ಜನಪ್ರಿಯವಾದ 'ಸುರಗಿರಿ ದುರ್ಗ'



ಆಳೆತ್ತರಕ್ಕೆ ಬೆಳೆದ ಪೊದರುಗಳ ಹಿಂದೆ ಶಿಥಿಲವಾದ
ಲಕ್ಷ್ಮೀ ನರಸಿಂಹ ಹಾಗೂ ಶಕ್ತಿದೇವಿ ದೇವಾಲಯ

ಈ ದೇವಾಲಯಕ್ಕೆ ಅಂಟಿಕೊಂಡಂತೆ ಇರುವ ಪಕ್ಕದ ಗುಡಿಯ ಗರ್ಭಗುಡಿ ಖಾಲಿ ಇದೆ. ಇಲ್ಲಿ ಬಹುಶಃ ಶಕ್ತಿದೇವಿ ಇದ್ದಿರಬೇಕು, ಕಾರಣ ಈ ಗರ್ಭಗುಡಿಯ ದ್ವಾರದಲ್ಲಿ ಇಬ್ಬರು ದೇವತೆಗಳು ಕಾವಲು ನಿಂತಿದ್ದಾರೆ. ಈ ದೇವಿಯ ಗುಡಿಯಿಂದ, ಬಗಲಿನ ಲಕ್ಷ್ಮೀ ನರಸಿಂಹ ಗುಡಿಗೆ ಪ್ರವೇಶ ದ್ವಾರವಿದೆ. ಆ ದ್ವಾರದ ಎರಡೂ ಬದಿ ಇಲ್ಲಿಯೂ ಸುಂದರವಾಗಿ ಕೆತ್ತಲ್ಪಟ್ಟ ಜಯ–ವಿಜಯರ ವಿಗ್ರಹಗಳಿವೆ.

ಎಪಿಗ್ರಾಫಿಯ ಕರ್ನಾಟಿಕ, ''ಮೈಸೂರಿನ ದೊರೆ ಚಿಕ್ಕ ದೇವರಾಯ ಒಡೆಯರ್ ಅವರ ಆಳ್ವಿಕೆಯ ಸಮಯದಲ್ಲಿ, 1698ರಲ್ಲಿ ಬಿಲಗಲೆ ಕೆಂಪರಾಜಯ್ಯನ ಮಗ ದಾಸರಾಜಯ್ಯ ನಿಜಗಲ್ಲಿನಲ್ಲಿ ನಾವೀಗ ಕಾಣುವ ಕೋಟೆಯನ್ನು ಕಟ್ಟಿದನು. ಅದನ್ನು 'ಸುರಗಿರಿ ದುರ್ಗ' ಎಂದೂ ಕರೆದರು'' ಎಂದು ಉಲ್ಲೇಖಿಸುತ್ತದೆ. 1698ರಿಂದ 1700ರ ನಡುವೆ ಕೋಟೆಯ ಬುರುಜುಗಳನ್ನು, 'ಪೂರ್ವ ದ್ವಾರ'ವನ್ನು ಕಟ್ಟಿ ನಿಲ್ಲಿಸಿದರೆ, 1701ರಿಂದ 1702ರ ನಡುವೆ, 'ದಕ್ಷಿಣ ದ್ವಾರ'ವನ್ನು ಕಟ್ಟಿದ್ದರು. ನಂತರ ದಾಸರಾಜಯ್ಯ ಲಕ್ಷ್ಮೀ ನರಸಿಂಹ ಸ್ವಾಮಿಯ ವಿಗ್ರಹವನ್ನು ಸುರಗಿರಿ ದುರ್ಗದಲ್ಲಿ 1718ರಲ್ಲಿ ಪ್ರತಿಷ್ಠಾಪಿಸಿದನು.

ಯುದ್ಧಾನುಕೂಲವಾಗಿ ಆಯಕಟ್ಟಿನ ಜಾಗದಲ್ಲಿ ನಿಂತಿರುವ ಸುರಗಿರಿ ದುರ್ಗ, 1761ರಿಂದ 1782ರ ನಡುವೆ, ಹೈದರ್ ಅಲಿ, ಮರಾಠರು